# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೨೨, ಜುಲೈ, ೨೦೨೬ (ಆಷಾಢ, ೩೧, ಶಕವರ್ಷ, ೧೯೪೮)<br>BENGALURU, WEDNESDAY, 22, JULY, 2026 (ASHADHA,31,ShakaVarsha,1948) | ನಂ. ೫೪೬<br>No.546 |


## ಕರ್ನಾಟಕಸರ್ಕಾರ

ಸಂಖ್ಯೆ: RDPR 622 GPA 2026

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ :22.07.2026.

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 66, 67, 68, 69, 70, 97,199, 199 ಎ,199 ಬಿ,199 ಸಿ, 200, 201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 ನ್ನು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಈ ಕೆಳಕಂಡ ಕರಡು ನಿಯಮಗಳನ್ನು ಅಧಿನಿಯಮದ ಪ್ರಕರಣ 311 ರ ಉಪ-ಪ್ರಕರಣ (1) ರಲ್ಲಿ ನಿಗಧಿಪಡಿಸಿದಂತೆ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ಏಳು ಕೆಲಸದ ದಿನಗಳ ನಂತರ ಸದರಿ ಕರಡು ನಿಯಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಈ ಕರಡು ನಿಯಮಗಳಿಗೆ ಕುರಿತಂತೆ ಈ ಮೇಲೆ ನಿರ್ದಿಷ್ಟಪಡಿಸಿದ, ಅವಧಿಯೊಳಗಾಗಿ ರಾಜ್ಯ ಸರ್ಕಾರದಿಂದ ಯಾವುದೇ ವ್ಯಕ್ತಿಯಿಂದ ಸ್ವೀಕೃತವಾಗುವ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಪಂಚಾಯತ್ ರಾಜ್), ಬಹುಮಹಡಿಗಳ ಕಟ್ಟಡ, ಡಾ:ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರ ವಿಳಾಸಕ್ಕೆ ಸಲ್ಲಿಸಬಹುದಾಗಿದೆ.

## ಕರಡು ನಿಯಮಗಳು

**1. ಹೆಸರು ಮತ್ತು ಪ್ರಾರಂಭ.**-(1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ನಿಯಮ 2ಕ್ಕೆ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲಖಿಸಲಾಗಿದೆ), ನಿಯಮ 2 ರ ಖಂಡ (9) ರಲ್ಲಿ "ಲಗತ್ತಿಸಿರುವ ನಮೂನೆ" ಎಂಬ ಪದಗಳ ನಂತರ "ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರಲ್ಲಿ ನಿಗಧಿಪಡಿಸಿರುವ ನಮೂನೆ 11ಎ ಹಾಗೂ ನಮೂನೆ 11ಬಿ ಎಂಬ ಪದಗಳು, ಅಕ್ಷರಗಳು, ಅಂಕಿಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

**3. ನಿಯಮ 5 ಕ್ಕೆ ತಿದ್ದುಪಡಿ, -** ಸದರಿ ನಿಯಮಗಳ, ನಿಯಮ 5,

(1) ಉಪನಿಯಮ (1)ರ,-

(i) ಖಂಡ (ಅ) ರ ನಂತರ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು:-

"ಪರಂತು, ನೊಂದಾಯಿತ ದಾಖಲೆಗಳ ಆಧಾರದಲ್ಲಿ ಅನುಬಂಧ – 1 ರ ಕ್ರಮ ಸಂಖ್ಯೆ 1 ರ ಅನ್ವಯ ದಾಖಲೆಗಳು ಅಥವಾ ನೊಂದಾಯಿತ ದಾಖಲೆಗಳನ್ನು ಒದಗಿಸದ ಸಂದರ್ಭದಲ್ಲಿ ಅನುಬಂಧ -1 ರ ಕ್ರಮ ಸಂಖ್ಯೆ 1-ಎ ರಲ್ಲಿನ ದಾಖಲೆಗಳ ಅನ್ವಯ ನಮೂನೆಗಳನ್ನು ವಿತರಿಸುವುದು."

(ii) ಖಂಡ (ಏ)ರ ಉಪಖಂಡ (ii)ರ ಕ್ರಮ ಸಂಖ್ಯೆ (1) ರ "ಗ್ರಾಮ ಪಂಚಾಯಿತಿಯ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ" ಎಂಬ ಪದಗಳ ಪೂರ್ವದಲ್ಲಿ "ದಿನಾಂಕ 24.04.2025 ರ ಪೂರ್ವದಲ್ಲಿ ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಫಲಾನುಭವಿಗಳಿಗೆ ನೀಡಿರುವ ಹಕ್ಕುಪತ್ರ ಪಡೆದು ಅನುಬಂಧ-1ರಲ್ಲಿ ನಿಗಧಿಪಡಿಸಿರುವಂತಹ ದಾಖಲೆಗಳನ್ನು ಪಡೆದು ತಂತ್ರಾಂಶದಲ್ಲಿ ದಾಖಲಿಸಿ ನಮೂನೆ 11ಎ ವಿತರಿಸತಕ್ಕದ್ದು. ದಿನಾಂಕ 24.04.2025 ತರುವಾಯ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

(2) ಉಪನಿಯಮ (2)ರ,-

(i) ಖಂಡ (i)ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ.-

"(i) ಗ್ರಾಮ ಪಂಚಾಯಿತಿ ಗ್ರೇಡ್ -I/ ಗ್ರೇಡ್-II ಕಾರ್ಯದರ್ಶಿಗಳು ಅರ್ಜಿಯನ್ನು ಸ್ವೀಕರಿಸಿದ ನಂತರ ಸ್ಥಳ ಪರಿಶೀಲನೆಯನ್ನು ಕೈಗೊಂಡು ನಾಲ್ಕು ಕರ್ತವ್ಯದ ದಿನಗಳಲ್ಲಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು. ನಿಯಮ 5ರ ಉಪನಿಯಮ (1)ರ ಖಂಡ (ಏ) ಮತ್ತು 5ರ ಉಪನಿಯಮ (1)ರ ಖಂಡ (ಎ) ಅನ್ನು ಹೊರತು ಪಡಿಸಿ ಗ್ರಾಮ ಪಂಚಾಯಿತಿ ಗ್ರೇಡ್-I / ಗ್ರೇಡ್-II ಕಾರ್ಯದರ್ಶಿಗಳು ಅರ್ಜಿಯನ್ನು ಸ್ವೀಕರಿಸಿದ ನಂತರ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿನಲ್ಲಿ ಮತ್ತು ಸಾರ್ವಜನಿಕ ಸ್ಥಳದಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು, ಸ್ವೀಕರಿಸಿದ ಆಕ್ಷೇಪಣೆಗಳನ್ನು ನಾಲ್ಕು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇ ಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ

ಅಧಿಕಾರಿಗೆ ಸಲ್ಲಿಸುವುದು, ಸದರಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರ ಅನುಮೋದನಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ನಾಲ್ಕು ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಸ್ವಯಂಚಾಲಿತವಾಗಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು.

(ii) ಖಂಡ (iii) ರಲ್ಲಿ " ನಿಯಮ 15(ಇ)" ಎಂಬ ಪದ, ಅಂಕಿ ಮತ್ತು ಅಕ್ಷರಗಳ ಬದಲಾಗಿ ನಿಯಮ 15(1) (ಇ)' ಎಂಬ ಪದ ಅಂಕಿ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

4. **ನಿಯಮ 8ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 8ರ, ಉಪನಿಯಮ (2)ರ,-

(i) ಖಂಡ (ಆ)ರ ಉಪಖಂಡ (v)ರ ತರುವಾಯ ಈ ಕೆಳಕಂಡಂತೆ ಸೇರಿಸತಕ್ಕದ್ದು, ಎಂದರೆ;-

"(VI) ಕೃಷಿ ಭೂಮಿಯಲ್ಲಿ ವಾಸ / ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿಸಿರುವ ಕಟ್ಟಡಗಳು ಎಂದರೆ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ಜಮೀನಿನಲ್ಲಿ ವ್ಯವಸಾಯಗಾರನ ನಿವಾಸಕ್ಕಾಗಿ ಅಥವಾ ವ್ಯವಸಾಯದ ಸಲಕರಣೆಗಳನ್ನು ಇಡುವ ಉದ್ದೇಶಕ್ಕಾಗಿ ಬಳಕೆಯಾದ ವ್ಯವಸಾಯ ಭೂಮಿಯ ಭಾಗದಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಲಗತ್ತಾದ ಕಟ್ಟಡ ಎಂದು ವರ್ಗೀಕೃತವಾಗಿರತಕ್ಕದ್ದು ಹಾಗೂ ಅನುಬಂಧ-2 ರ ಕ್ರಮ ಸಂಖ್ಯೆ: 6 ರಲ್ಲಿ ನಿಗದಿಪಡಿಸಿರುವ ದಾಖಲಾತಿಗಳನ್ನು ಪಡೆದು ಕಟ್ಟಡ ನಿರ್ಮಿತ ವಿಸ್ತೀರ್ಣಕ್ಕೆ ನಮೂನೆ -11ಬಿ ನೀಡತಕ್ಕದ್ದು."

(ii) ಖಂಡ (ಇ) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ:-

" (ಇ) ಗ್ರಾಮ ಪಂಚಾಯಿತಿ ಗ್ರೇಡ್ -I/ ಗ್ರೇಡ್-II ಕಾರ್ಯದರ್ಶಿಗಳು ಅರ್ಜಿಯನ್ನು ಸ್ವೀಕರಿಸಿದ ನಂತರ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿನಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು, ಸ್ವೀಕರಿಸಿದ ಆಕ್ಷೇಪಣೆಗಳನ್ನು ನಾಲ್ಕು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು, ಸದರಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವದಿ, ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕರ ಅನುಮೋದನೆಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ನಾಲ್ಕು ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು."

(iii) ಖಂಡ (ಉ)ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ.-

(ಉ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025ರ ದಿನಾಂಕ: 07.04.2025 ಕ್ಕೆ ಮುಂಚಿತವಾಗಿ ಸೃಜನೆಯಾಗಿರುವ ಕಟ್ಟಡ ಮತ್ತು

ನಿವೇಶನಗಳು, ಗ್ರಾಮ ಪಂಚಾಯತಿಯು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕೈಬಿಡಲಾಗಿದೆ ಎಂದು ಬಾಧಿತರಾದ ವ್ಯಕ್ತಿಗಳು/ ಸಂಸ್ಥೆಗಳು ಮತ್ತು ಮೇಲಿನ ಉಪಬಂಧಗಳನ್ನು ಜಾರಿ ಮಾಡುವಾಗ ಗ್ರಾಮ ಪಂಚಾಯತಿಯ ತೀರ್ಮಾನದಿಂದ ಬಾಧಿತರಾದ ವ್ಯಕ್ತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರ ನಿಯೋಜಿಸಿದ ಅಧಿಕಾರಿಗೆ ನಿಯಮ 15 ರಲ್ಲಿ ಮೇಲ್ಮನವಿ ಸಲ್ಲಿಸಬಹುದು.

(ಊ) ಗ್ರಾಮ ಪಂಚಾಯತಿಯು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕೈಬಿಡಲಾಗಿರುವ ಆಸ್ತಿಗಳ ವಿವರಗಳನ್ನು ಬಾಧಿತರಾದ ವ್ಯಕ್ತಿಗಳ ಮೂಲಕ ತಂತ್ರಾಂಶದಿಂದ ಸ್ವೀಕರಿಸಿದ ನಂತರ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಪಂಚತಂತ್ರ 2.0 ತಂತ್ರಾಂಶದಲ್ಲಿ ಸದರಿ ಆಸ್ತಿಯ ಮಾಹಿತಿಯು ಇಲ್ಲದಿರುವ ಬಗ್ಗೆ, ಹಾಗೂ ಸ್ಥಳ ಪರಿಶೀಲಿಸಿ ಅಂತಹ ಆಸ್ತಿಗಳು ನಿಯಮಾನುಸಾರ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ದೃಢೀಕರಿಸಿಕೊಂಡು ಹತ್ತು ಕರ್ತವ್ಯದ ದಿನಗಳಲ್ಲಿ ಜಿಲ್ಲಾ ಪಂಚಾಯಿತಿಯ ಸಹಾಯಕ ಕಾರ್ಯದರ್ಶಿಗಳಿಗೆ ತಂತ್ರಾಂಶದ ಮೂಲಕ ಸೂಕ್ತ ಷರಾದೊಂದಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯಲ್ಲಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸೂಕ್ತ ದೃಢೀಕರಣದೊಂದಿಗೆ ಸಲ್ಲಿಸದ ಸಂದರ್ಭದಲ್ಲಿ, ಸ್ವಯಂ ಚಾಲಿತ ದೃಢೀಕರಣದೊಂದಿಗೆ ಸಹಾಯಕ ಕಾರ್ಯದರ್ಶಿಗಳಿಗೆ ತಂತ್ರಾಂಶದ ಮೂಲಕ ವರ್ಗಾವಣೆಯಾಗತಕ್ಕದ್ದು.

(ಋ) ಒಂದು ವೇಳೆ, ಸದರಿ ಆಸ್ತಿಯು ಪಂಚತಂತ್ರ 2.0 ತಂತ್ರಾಂಶದಲ್ಲಿ ಮಾಹಿತಿಯು ಲಭ್ಯವಿದ್ದಲ್ಲಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅರ್ಜಿಯನ್ನು ತಿರಸ್ಕರಿಸಿ, ಪಂಚತಂತ್ರ 2.0 ತಂತ್ರಾಂಶದಲ್ಲಿನ ಮಾಹಿತಿಯನ್ವಯ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ತಂತ್ರಾಂಶದ ಮೂಲಕ ತಿಳಿಸತಕ್ಕದ್ದು.

(ಏ) ಜಿಲ್ಲಾ ಪಂಚಾಯಿತಿಯ ಸಹಾಯಕ ಕಾರ್ಯದರ್ಶಿಯು ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ಸ್ವೀಕರಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಾ ದಾಖಲೆಯೊಂದಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರ ನಿಯೋಜಿಸಿದ ಅಧಿಕಾರಿಗಳಿಗೆ ನಿಯಮ 15 ರಂತೆ ಮೇಲ್ಮನವಿ ಪ್ರಕ್ರಿಯೆಗಾಗಿ ಐದು ಕರ್ತವ್ಯದ ದಿನದೊಳಗೆ ಸಲ್ಲಿಸುವುದು. ನಿಗಧಿತ ಅವಧಿಯಲ್ಲಿ ಸಹಾಯಕ ಕಾರ್ಯದರ್ಶಿಯು ಮೇಲ್ಮನವಿ ಪ್ರಕ್ರಿಯೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರ ನಿಯೋಜಿಸಿದ ಅಧಿಕಾರಿಗಳಿಗೆ ಸಲ್ಲಿಸದ ಸಂದರ್ಭದಲ್ಲಿ ಸ್ವಯಂ ಚಾಲಿತವಾಗಿ ಪರಿಶೀಲಿಸಲಾಗಿದೆ ಎಂಬ ಪರಾದೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರ ನಿಯೋಜಿಸಿದ ಅಧಿಕಾರಿಗಳಿಗೆ ತಂತ್ರಾಂಶದ ಮೂಲಕ ವರ್ಗಾವಣೆಯಾಗತಕ್ಕದ್ದು:

ಪರಂತು, ದಿನಾಂಕ:17.10.2025 ರಿಂದ ದಿನಾಂಕ: 30.09.2026ರವರೆಗೆ ಈ ಮೇಲಿನ ಉಪ ನಿಯಮಗಳಡಿ ಮೇಲ್ಮನವಿ ಸಲ್ಲಿಸಲು ಅವಕಾಶ ಇರುತ್ತದೆ. ಆದರೆ, ದಿನಾಂಕ: 30.09.2026ರ ನಂತರ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ."

5. **ನಿಯಮ 9ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 9ರ ಉಪ ನಿಯಮ (12)ರ ಖಂಡ (ಅ)ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ.-

"(ಅ) ಅಧಿನಿಯಮದ ಪ್ರಕರಣ 199 ಮತ್ತು 201 ರಡಿಯಲ್ಲಿ ಯಾವುದೇ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವುದೇ

ವ್ಯಕ್ತಿಯು ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಗೆ ನಿಯಮ 15 ರಡಿಯಲ್ಲಿ ಮೇಲ್ಮನವಿ ಸಲ್ಲಿಸತಕ್ಕದ್ದು."

6. **ನಿಯಮ 12ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 12ರ,-

(i) ಉಪನಿಯಮ (4) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ:-

"(4). ಗ್ರಾಮ ಪಂಚಾಯಿತಿ ಗ್ರೇಡ್ -I/ಗ್ರೇಡ್-II ಕಾರ್ಯದರ್ಶಿಗಳು ಅರ್ಜಿಯನ್ನು ಸ್ವೀಕರಿಸಿದ ನಂತರ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿನಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು, ಸ್ವೀಕರಿಸಿದ ಆಕ್ಷೇಪಣೆಗಳನ್ನು ನಾಲ್ಕು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇ ಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು, ಸದರಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅನುಮೋದನೆಗೆ ಸಲ್ಲಿಸತಕ್ಕದ್ದು. ಅಧ್ಯಕ್ಷರು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸ್ವೀಕರಿಸಿದ ತರುವಾಯ ಕಾರ್ಯನಿರ್ವಹಿಸುವ (Working Days) ನಾಲ್ಕು ದಿನದೊಳಗಾಗಿ ತೀರ್ಮಾನಿಸತಕ್ಕದ್ದು. ಒಂದು ವೇಳೆ ಅಧ್ಯಕ್ಷರು ಸದರಿ ನಾಲ್ಕು ಕಾರ್ಯನಿರ್ವಹಿಸುವ ದಿನದೊಳಗಾಗಿ ತೀರ್ಮಾನಿಸಲು ವಿಫಲರಾದರೆ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಶಿಫಾರಸ್ಸು ಅಧ್ಯಕ್ಷರ ತೀರ್ಮಾನವೆಂದು ಭಾವಿಸತಕ್ಕದ್ದು."

(ii) ಉಪನಿಯಮ (6)ರ ಖಂಡ (ಅ)ರಲ್ಲಿ ಹದಿನೈದು ದಿನಗಳೊಳಗೆ" ಎಂಬ ಪದಗಳ ಬದಲಾಗಿ 'ಏಳು ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸಲಾಗಿದೆ.

(iii) ಉಪನಿಯಮ (7)ರ ನಂತರ ಈ ಕೆಳಕಂಡಂತೆ ಸೇರಿಸಿಕೊಳ್ಳತಕ್ಕದ್ದು ಎಂದರೆ:-

"(8) ಇ-ಸ್ವತ್ತು ತಂತ್ರಾಂಶದ ಮೂಲಕ ಸೃಜಿಸಲಾದ ನಮೂನೆಗಳಲ್ಲಿನ ತಿದ್ದುಪಡಿಗಳನ್ನು ಸೂಕ್ತ ದಾಖಲೆ ಹಾಗೂ ಪರಾದೊಂದಿಗೆ ತಂತ್ರಾಂಶದ ಮೂಲಕ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸತಕ್ಕದ್ದು. ಇ-ಸ್ವತ್ತು ತಂತ್ರಾಂಶದ ಮೂಲಕ ಸ್ವೀಕರಿಸಲಾದ ತಿದ್ದುಪಡಿ ಪ್ರಸ್ತಾವನೆಯನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ತಂತ್ರಾಂಶದ ಮೂಲಕ ನಾಲ್ಕು ಕರ್ತವ್ಯದ ದಿನದೊಳಗೆ ಅನುಮೋದನೆಯೊಂದಿಗೆ ತಿದ್ದುಪಡಿಗಾಗಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು ತಪ್ಪಿದಲ್ಲಿ ಸ್ವಯಂಚಾಲಿತ ಅನುಮೋದನೆಯೊಂದಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ವರ್ಗಾವಣೆಯಾಗತಕ್ಕದ್ದು.

(9) ಇ-ಸ್ವತ್ತು ತಂತ್ರಾಂಶದ ಮೂಲಕ ಸೃಜಿಸಲಾದ ನಮೂನೆಗಳನ್ನು ರದ್ದುಪಡಿಸುವ (invalidation) ಸಂದರ್ಭದಲ್ಲಿ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಂತ್ರಾಂಶದ ಮೂಲಕ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ)/ ಉಪ ಕಾರ್ಯದರ್ಶಿಗೆ ಸಲ್ಲಿಸತಕ್ಕದ್ದು. ಉಪ ಕಾರ್ಯದರ್ಶಿ (ಅಭಿವೃದ್ಧಿ)/ ಉಪ ಕಾರ್ಯದರ್ಶಿಯು ತಂತ್ರಾಂಶದ ಮೂಲಕ ಸ್ವೀಕರಿಸಲಾದ ಪ್ರಸ್ತಾವನೆ

ಹಾಗೂ ದಾಖಲೆಗಳನ್ನು ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳಡಿಯಲ್ಲಿ ಪರಿಶೀಲಿಸಿ, ಸೂಕ್ತ ವಿಚಾರಣೆ ನಡೆಸಿ, ಅವಶ್ಯವಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ ನಮೂನೆಯನ್ನು ರದ್ದುಪಡಿಸುವ ಪ್ರಸ್ತಾವನೆಯನ್ನು ಸೂಕ್ತ ಆದೇಶದ ಮೂಲಕ ಹಿರಿಯ ಪಂಚಾಯಿತಿ ಅಭಿವೃದ್ದಿ ಅಧಿಕಾರಿ / ಪಂಚಾಯಿತಿ ಅಭಿವೃದ್ದಿ ಅಧಿಕಾರಿಗೆ ತಂತ್ರಾಂಶದ ಮೂಲಕ ವರ್ಗಾವಣೆ ಆಗತಕ್ಕದ್ದು."

7. **ನಿಯಮ 15ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 15ರ ಉಪನಿಯಮ (2) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ:-

" (2) ನಿಯಮ 8 ರ ಅಳವಡಿಕೆಯಿಂದ ತಂತ್ರಾಂಶದಲ್ಲಿ ಆಸ್ತಿ ಸೇರಿಸುವಂತಹ ತೀರ್ಮಾನದಿಂದ ಭಾದಿತರಾದ ವ್ಯಕ್ತಿಯು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರವು ನಿಯೋಜಿಸಿದ ಅಧಿಕಾರಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸರ್ಕಾರವು ನಿಯೋಜಿಸಿದ ಅಧಿಕಾರಿಯು ಮೇಲ್ಮನವಿ ಸ್ವೀಕರಿಸಿದ ತಕ್ಷಣ ಸಂಬಂಧಿಸಿದ ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ದಿ ಅಧಿಕಾರಿ/ಪಂಚಾಯತಿ ಅಭಿವೃದ್ದಿ ಅಧಿಕಾರಿಗೆ ನೋಟೀಸ್ ನೀಡಿ ವಿಚಾರಣೆಗೆ ದಿನಾಂಕವನ್ನು ನಿಗಧಿಪಡಿಸತಕ್ಕದ್ದು, ವಿಚಾರಣೆಯ ದಿನಾಂಕದಂದು ಉಭಯತ್ರರ ದಾಖಲೆ ಮತ್ತು ವಾದವನ್ನು ಪರಿಶೀಲಿಸಿ ಲಭ್ಯ ದಾಖಲೆಗಳ ಆಧಾರದ ಮೇಲೆ ಮತ್ತು ಅಗತ್ಯವೆನಿಸಿದರೆ ಸ್ಥಳ ಪರಿಶೀಲನೆ ಮಾಡಿ ತರ್ಕಬದ್ದ ಅದೇಶ (Speaking Order) ವನ್ನು ಹೊರಡಿಸತಕ್ಕದ್ದು."

8. **ಅನುಬಂಧ-1ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ಅನುಬಂಧ-1ರ,-

(1) ಕ್ರಮ ಸಂಖ್ಯೆ: 1 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಕೆಳಗಿನದನ್ನು ಸೇರಿಸತಕ್ಕದ್ದು ಎಂದರೆ:-

| **ಕ್ರ. ಸಂ** | **ವರ್ಗೀಕರಣ** | **ದಾಖಲೆಗಳು** | **ಷರಾ** |
|---|---|---|---|
| 1(a) | ಗ್ರಾಮ ಠಾಣಾ* **(ನೊಂದಾಯಿತ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ)** | 1. ದಿಶಾಂಕ್/ತಹಶೀಲ್ದಾರರ ಗ್ರಾಮ ಠಾಣಾ ನಕ್ಷೆ | ಕಡ್ಡಾಯ |
| | | 2.ದಿನಾಂಕ: -14.06.2013ರ ಪೂರ್ವದಲ್ಲಿನ ಕರ ನಿರ್ಧರಣಾ ವಹಿಯ ಉದ್ರುತ ಭಾಗ ಅಥವಾ ಪಂಚತಂತ್ರ ತಂತ್ರಾಂಶದಲ್ಲಿ ಪಿಐಡಿ ಸಂಖ್ಯೆಯು ನಮೂದಾಗಿರುವ ಬಗ್ಗೆ ಪಿಡಿಒ ದೃಢೀಕರಣ. | ಕಡ್ಡಾಯ |
| | | 3. ವಿದ್ಯುತ್ ಬಿಲ್ ಅಥವಾ ಎಸ್ಕಾಂನ ಅಕೌಂಟ್ ಐಡಿ ಸೇಟ್‌ಮೆಂಟ್ (ದಿನಾಂಕ:14.06.2013 ರ ಪೂರ್ವ) | ಕಡ್ಡಾಯ |
| | | 4. ಸ್ಥಳ ಮಹಜರ್ ಪ್ರತಿ | ಕಡ್ಡಾಯ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(2) ಕ್ರಮ ಸಂಖ್ಯೆ: 9 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ. ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

| | | | |
|---|---|---|---|
| 9 | ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಸೆಕ್ಷನ್ 94ಸಿ/ 94ಸಿಸಿ/ 94 ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ | ಕಡ್ಡಾಯ |
| | | 2. ಋಣ ಭಾರ ಪ್ರಮಾಣ ಪತ್ರ (ನಮೂನೆ-15/16) | ಐಚ್ಛಿಕ |
| | | 3. ಕಂದಾಯ ಇಲಾಖೆ ಅಧಿಕಾರಿಯ ದೃಢಿಕರಣ ಪತ್ರ | ಕಡ್ಡಾಯ |
| | | 4. ಸೇಲ್ ಡೀಡ್/ ಸ್ವತ್ತಿನಕಾರ್ಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕುಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ (ನಮೂದಿಸಿ) | ಐಚ್ಛಿಕ |

(3) ಕ್ರಮ ಸಂಖ್ಯೆ: 13 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ, ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

| | | | |
|---|---|---|---|
| 13. | ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಸ್ಥಳೀಯ ಸಂಸ್ಥೆಗಳ ನಿವೇಶನ/ಕಟ್ಟಡ | ಪಹಣಿಪತ್ರ/ ದಾನಪತ್ರ / ಖರೀದಿ ಪತ್ರ / ಮಂಜೂರಾತಿ ಪತ್ರ /ಪರಿತ್ಯಾಜನಾ ಪತ್ರ | ಕಡ್ಡಾಯ |

9**. ಅನುಬಂಧ-2ಕ್ಕೆ ತಿದ್ದುಪಡಿ.-** ಸದರಿ ನಿಯಮಗಳ, ಅನುಬಂಧ-2ರ ಕ್ರಮ ಸಂಖ್ಯೆ: 5 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ, ಈ ಕೆಳಗಿನದನ್ನು ಸೇರಿಸತಕ್ಕದ್ದು ಎಂದರೆ:-

| **ಕ್ರ. ಸಂ** | **ವರ್ಗೀಕರಣ** | **ದಾಖಲೆಗಳು** | **ಷರಾ** |
|---|---|---|---|
| 6. | ಕೃಷಿ ಭೂಮಿಯಲ್ಲಿ ವಾಸ / ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿಸಿರುವ ಕಟ್ಟಡಗಳು | 1. ವಿದ್ಯುತ್ ಬಿಲ್ (ದಿನಾಂಕ: 07.04.2025 ರ ಪೂರ್ವದ್ದು) | ಕಡ್ಡಾಯ |
| | | 2. RTC (ಮೂಲ ಮಾಲೀಕರ ಹೆಸರಿನಲ್ಲಿರುವುದು) | ಕಡ್ಡಾಯ |
| | | 3. ಋಣ ಭಾರ ಪ್ರಮಾಣ ಪತ್ರ (EC) | ಕಡ್ಡಾಯ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯಲ್ಲಯ್ಯ)
ಪೀಠಾಧಿಕಾರಿ (ಗ್ರಾಮ ಪಂಚಾಯತಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU